Pickup across Suvarnamukhihalla

81 SRI T TAREGOWDA (Kallambella)— Will the Minister of State for Minor Irrigation and Protocol be pleased to state.—

(*a*) whether the estimate for constructing a pickup across Suvarnamukhihalla near Gajjanalli to irrigate about 250 acres of Mosarekunte old tank atchkat lands and old pickup channel lands and additional atchkat lands of Tavarekere, Sira taluk submitted to Government by Superintending Engineer and Chief Engineer has been sanctioned both administratively and technically;

(*b*) if so, whether provision has been made for the work in the budget of 1977-78;

(*c*) whether the Government is aware that it is restoring the previous channel benefit to the existing atchkat lands?

SRI H. C. SRIKANTIAH (Minister of State for Minor Irrigation and Protocol).—

(*a*) No.

(*b*) This work is proposed for inclusion in the Budget Estimates of 1977-78 as a fresh work.

(*c*) Yes.

ಶ್ರೀ ಟಿ ತಾರೇಗೌಡ.—ಸ್ವಾಮಿ, ಸುವರ್ಣಮುಖಿ ಹಳ್ಳಕ್ಕೆ ಪಿಕಪ್ ಕಟ್ಟುವುದಕ್ಕಾಗಿ ಹಿಂದೆ ಹಣವನ್ನು ಒದಗಿಸಿದ್ದರು. ೧೯೭೬ರಲ್ಲಿ ಭಾರಿ ಮಳೆ ಬಂದಿದ್ದರಿಂದ ಆ ಹಳ್ಳ ಬಿದ್ದು ಪಿಕಪ್ ಎಸ್ಟಿಮೇಟ್ ಈಗ ಜಾಸ್ತಿಯಾಗಿದೆ. ಆ ಸ್ಥಳದಲ್ಲಿ ಯಾರು ಯಾರು ಜಮೀನುಗಳನ್ನು ಅನುಭವಿಸುತ್ತಿದ್ದರು ಅವರಿಗೆ ಈಗ ಬಹಳ ಕಷ್ಟವಾಗಿದೆ. ಆದುದರಿಂದ ಈ ಕಾರ್ಯವನ್ನು ಅದಷ್ಟು ಜಾಗ್ರತೆ ಕಾರ್ಯಗತ ಮಾಡುತ್ತೀರಾ

† ಶ್ರೀ ಹೆಚ್. ಸಿ. ಶ್ರೀ ಕಂಠಯ್ಯ.—ಆಗ ಇದು ಟೆಕ್ನಿಕಲ್ ಫೀಸಿಬಲ್ ಆಗಿಲ್ಲದಿದ್ದುದರಿಂದ ಇದನ್ನು ೧೯೭೭–೭೮ನೇ ಸಾಲಿನಲ್ಲಿ ಹೊಸ ಕಾಮಗಾರಿಯಾಗಿ ಸೇರ್ಪಡೆ ಮಾಡಿದ್ದೇವೆ.

MADAM SPEAKER.—Now Question are over

CALLING ATTENTION TO MATTER OF URGENT PUBLIC IMPORTANCE

re : Sudden increase in the price of milk by Bangalore Dairy without notice to consumers.

SRI T. R. SHAMANNA (Fort).—Madam Speaker I call the attention of the Minister of State for Animal Husbandry to the sudden increase in the price of milk by Bangalore Dairy without notice to consumers.

SRI B G. BANAKAR (Minister of State for Animal Husbandry).— Madam Speaker, in response to the Calling Attention Motion of the Hon'ble Member Sri Shamanna, I wish to make the following Statement.—

With effect from 25th March 1977 the sale price of Bangalore Dairy Milk has been fixed at Rs. 2 00 per litre instead of Rs.1 .80. The increase has been made in keeping with the accepted policy in the Dairy business of relating the sale price to the procurement price at different seasons of the year.

The price during the last 1976 summer season was also Rs. 2.00 per litre. Subsequently in view of better availability of milk the price was reduced to Rs 1.80 per litre in November 1976. With the recent onset of summer the cost of production of milk has gone up due to fall in the milk yields of animals as also also sharp increase in the price of cattle feed etc. Therefore the price paid to the producer (which had also been reduced in two stages by 0.20p) was restored in two stages 0.10p increase in February and further 0.10p earlier this month. The average cost to the Dairy per litre of milk delivered to the public is at present Rs. 2.18 and therefore even at Rs. 2.00 per litre there is an element of subsidy. Considering the fact that even non-pasturised milk is being sold by private vendors at the rate of Rs. 2 00 or higher, the price of 2.00 per litre is quite reasonable.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷಣಿಯವರೆ ಇದೇ ತಿಂಗಳು ೨೫ನೇ ತಾರೀಖಿನ ದಿವಸ ಮಾನ್ಯ ರಾಜ್ಯಪಾಲರವರು ಭಾಷಣ ಮಾಡುವಾಗ ಡೈರಿ ಯೋಜನೆಯ ಬಗ್ಗೆ ಮಾತನಾಡುತ್ತಾ, ಡೈರಿ ಯೋಜನೆಯು ಬಹಳ ಯಶಸ್ವಿಯಾಗಿ ನಡೆಯುತ್ತಿದ್ದು ಹೆಚ್ಚು ಪರಿ ಹಾಲು ಸಾಕಷ್ಟು ಉತ್ಪಾದನೆಯಾಗುತ್ತಿದ್ದು ಇದನ್ನು ಬಳಸುವ ಬಗ್ಗೆ ಒಂದು ದೊಡ್ಡ ಸಮಸ್ಯೆಯೇ ಉದ್ಭವವಾಗಿದೆಯೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.ಒಂದುಕಡೆ ಹಾಲಿನ ಉತ್ಪಾದನೆಯು ಯಥೇಚ್ಛವಾಗಿ ಇದೆ ಎಂದು ಹೇಳಿದರೆ ಮತ್ತೊಂದು ಕಡೆ ಮಂತ್ರಿಯವರು ಹೇಳುತ್ತಾರೆ. ನಮಗೆ ಸಾಕಷ್ಟು ಹಾಲು ಉತ್ಪಾದನೆಯಾಗುತ್ತಿಲ್ಲ, ಇದಂದಾಗಿ ರೈತರಿಗೆ ಉತ್ತೇಜಿತ ಬೆಲೆಯನ್ನು ಕೊಡಲು ಹಾಲಿನ ಬೆಲೆಯನ್ನು ಜಾಸ್ತಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ ಈ ರೀತಿ ಇದ್ದಕ್ಕಿದ್ದಂತೆ ಹಾಲಿನ ಬೆಲೆಯನ್ನು ಇಳಿಸಿ ಮತ್ತೆ ಇದ್ದಕ್ಕಿದ್ದಂತೆ ಹಾಲಿನ ಬೆಲೆಯನ್ನು ಏರಿಸುವುದಕ್ಕೆ ಕಾರಣವೇನು ? ಚುನಾವಣೆ ಆಗುವ ತನಕ ಸುಮ್ಮನಿದ್ದು, ಚುನಾವಣೆ ಆದ ತಕ್ಷಣವೆ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿರುವುದು ಯಾವರೀತಿ ನ್ಯಾಯ ? ಇದು ವ್ಯವಹಾರದ ರೀತಿಯೇ ? ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಜಿ. ಬಣಕಾರ್.—ಮಾನ್ಯ ಅಧ್ಯಕ್ಷರೆ ಮಾನ್ಯ ರಾಜ್ಯಪಾಲರು ಹೇಳಿದ್ದು ನೂರಕ್ಕೆ ನೂರು ಸತ್ಯವಾಗಿರುತ್ತದೆ. ಮಂಳೆಗಾಲದಲ್ಲಿ ಬೆಂಗಳೂರು ಡೈರಿಯೊಂದರಲ್ಲಿಯೇ ಸುಮಾರು ೨೫ ಸಾವಿರ ಲೀಟರ್ ನಷ್ಟು ಹಾಲು ಉತ್ಪಾದನೆಯು ಸರ್‌ಪ್ಲಸ್ ಬರತಕ್ಕಂಥದ್ದು ಇರುತ್ತದೆ ಹೀಗೆ ಉತ್ಪಾದನೆಯಾದಂಥ ಹಾಲನ್ನು ಏನು ಮಾಡಬೇಕೆಂಬುದು ಸಮಸ್ಯೆಯಾಗಿದೆ. ಇದನ್ನು ಮಿಲ್ಕ್ ಪೌಡರ್ ಆಗಿ ಪರಿವರ್ತಿಸಬೇಕೆಂದು ರಾಜ್ಯಪಾಲರು ಹೇಳಿದ್ದು ಸತ್ಯವಿರುತ್ತದೆ ಬೇಸಿಗೆ ಕಾಲದಲ್ಲಿ ಹಾಲಿನ ಉತ್ಪಾದನೆಯು ಕಡಿಮೆ ಇದ್ದು ಸರಬರಾಜು ಕೂಡ ಕಡಿಮೆ ಇರುತ್ತದೆ. ನಾಗರೀಕರಿಗೆ ಪೂರೈಕೆಗೆ ತೊಂದರೆಯಾಗದಿರಲು ಹಾಲಿನ ಉತ್ಪಾದನಾ ರೈತರಿಗೆ ಆಕರ್ಷಕ ಬೆಲೆಯನ್ನು ಕೊಟ್ಟು ಸರಿದೂಗಿಸಬೇಕಾದ ಕಾರಣದಿಂದ ಒಂದು ಲೀಟರ್‌ಗೆ ೨೦ ಪೈಸೆಯನ್ನು ಜಾಸ್ತಿಮಾಡಲಾಗಿದೆ. ಇದು ಈಗ ಮಾತ್ರಿರತಕ್ಕ ಕಾರ್ಯಕ್ರಮವಲ್ಲ. ಹಿಂದೆ ೯-೨-೧೯೭೫ ರಿಂದ ೩೦-೨-೧೯೭೫ರವರೆವಿಗೂ ಮತ್ತು ೧-೪-೧೯೭೫ ರಿಂದ ೨೧-೧೧-೧೯೭೬ರ

ವರೆಗೆ ಎರಡು ರೂಪಾಯಿಯೇ ಇತ್ತು. ಆದರೆ ಈ ವರ್ಷ ಮಳೆಗಾಲ ಕಡಿಮೆ ಇದ್ದು, ಹಾಲಿನ ಉತ್ಪಾದನೆಯೂ ಕಡಿಮೆ ಇದ್ದಕಾರಣ ಹಾಲಿನ ಬೆಲೆಯನ್ನು ಹೆಚ್ಚಿಸುವ ತೀರ್ಮಾನವನ್ನು ತೆಗೆದು ಕೊಳ್ಳಲಾಯಿತು. ಹೀಗೆ ತೆಗೆದುಕೊಂಡ ತೀರ್ಮಾನವು ಯೋಗ್ಯವಾಗಿರುತ್ತದೆಂದು ನಾನು ತಿಳಿಸುತ್ತೇನೆ.

ಶ್ರೀ ಟಿ ಆರ್. ಶಾಮಣ್ಣ.—ಡೈರಿಯವರಮೇಲೆ ನಮ್ಮ ಆರೋಪವೇನೆಂದರೆ ಅಡ್ವರ್‌ಟೈಸ್‌ಮೆಂಟ್‌ಗಾಗಿ ಬೇಕಾದಷ್ಟು ಖರ್ಚುಮಾಡುತ್ತಿದ್ದಾರೆ. ಮಳೆಗಾಲದಲ್ಲಿ ಆಗತಕ್ಕಂಥ ಖರ್ಚಿನ್ನು ಸಾಕಷ್ಟು ಉಳಿತಾಯಮಾಡಿ ಉಳಿದ ಕಾಲದಲ್ಲಿ ಸರಿದೂಗಿಸಿಕೊಂಡು ಸಾಕಷ್ಟು ಹಾಲನ್ನು ಒದಗಿಸಿರುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಇಲ್ಲವೇ ಬರೀ ಪ್ರಚಾರಕಾರ್ಯಕ್ರಮವನ್ನು ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಜಿ. ಬಣಕಾರ್ —ರೈತರು ಹೆಚ್ಚಿನ ಹಾಲು ಉತ್ಪಾದನೆಯನ್ನು ಮಾಡಿ ಡೇರಿಗೆ ಹಾಲನ್ನು ಸರಬರಾಜು ಮಾಡುವ ಬಗ್ಗೆ ಅಡ್ವರಟೈಸ್‌ಮೆಂಟ್ ಇರುತ್ತದೆಂದು ತಿಳಿಸಲು ಅಪೇಕ್ಷಿಪಡುತ್ತೇನೆ.

Objection for laying notifications issued under the Karnataka Municipalities Act 1964.

MADAM SPEAKER —We shall go to the next item on the agenda, namely, 'Papers to be laid on the Table'.

† SRI KAGODU THIMMAPPA (Sagar).—Madam Speaker, I wish to raise an objection in regard to these notifications.

ಇದರಲ್ಲಿ ಮಾನ್ಯ ಅಧ್ಯಕ್ಷರೆ ಏನಾಗಿದೆ ಎಂದು ಹೇಳಿದರೆ ನೋಟಿಫಿಕೇಶನ್ ನಂಬರ್ ಎಚ್. ಎಂ. ಎ. ೧೩ ಟಿಇಎಲ್ ೭೫ ದಿನಾಂಕ ೫ನೇ ಜುಲೈ ೧೯೭೬ರ ಪ್ರಕಾರ ಕಾರ್ಕಳ ನಗರಸಭೆಯನ್ನು ಸರ್ಕಾರ ತೆಗೆದು ಕೊಂಡ ಕ್ರಮ. ಅದರಂತೆ ನೋಟಿಫಿಕೇಶನ್ ನಂ. ಎಚ್.ಎಂ.ಎ ೨೨೧ ಟಿಎಡಿ ೭೫ (ಪಿ ಎಫ್) ದಿನಾಂಕ ೬ನೇ ಆಗಸ್ಟ್ ೧೯೭೬ ರಂದು ಕುಂದಾಪ್ರ ನಗರಸಭೆಯನ್ನು ಸರ್ಕಾರದವರು ವಶಕ್ಕೆ ತೆಗೆದ ಕೊಂಡಿರತಕ್ಕ ಕ್ರಮವನ್ನು ಕುರಿತು ನೋಟಿಫಿಕೇಶನ್ ಹೊರಡಿಸಿದ್ದಾರೆ ಆದನಂತರ ನವೆಂಬರ್ ತಿಂಗಳಲ್ಲಿ ಸಭೆಯನ್ನು ಸೇರಿದ್ದ ಸಂದರ್ಭದಲ್ಲಿ ಈ ವಿಚಾರವನ್ನು ಇಡಲಿಲ್ಲ ನೋಟಿಫಿಕೇಶನ್ ಹೊರಡಿಸಿದಮೇಲೆ, ತಕ್ಷಣ Whenever the session meets it is the responsibility of the Government to place these notifications on the table the House. There is complete error on the part of this Government. It is a negligence not only negligence but completely ignoring the privileges of this House. ಅದರ ಜೊತೆಗೆ ಇನ್ನೊಂದು ವಿಷಯ ಏನಾಗಿದೆ ಎಂದರೆ ಕುಂದಾಪುರ ನಗರ ಸಭೆಗೆ ಸಂಬಂಧ ಪಟ್ಟಂತೆ ಜನರು ಹೈಕೋರ್ಟಿಗೆ ಹೋಗಿ ರಿಟ್ ಹಾಕಿ ಹೊರಡಿಸಿದ ಆಜ್ಞೆಯನ್ನು ರದ್ದುಪಡಿಸಿದ ವಿಷಯವನ್ನು ಸಭೆಯ ಮುಂದೆ ಇಡಬೇಕಾದ ಅವಶ್ಯಕತೆ ಇಲ್ಲ ಸರ್ಕಾರ ಕ್ರಮ ಲೋಪ ಮಾಡಿದ್ದರೆ ಹೈಕೋರ್ಟ್ ರದ್ದುಪಡಿಸಿರುವುದರಿಂದ ಈ ಒಂದು ಕ್ರಮ ಸರ್ಕಾರಕ್ಕೆ ಉಚಿತವಲ್ಲವೆಂದು ಹೇಳಿದ್ದು ವಿಟ್ಟು ಈ ನೋಟಿಫಿಕೇಶನ್‌ನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† SRI M. S. KRISHNAN (Malleswaram) —Madam Speaker, rule 304 which refers to papers quoted to be laid on the table does not apply to these notifications at all. They ought to bring it immediately the notification was made or in the immediate session when it meets. That has been the tradition and convention that is followed in the Parliament as well as in our own Assembly. Now they are breaking all the conventions, traditions and the parliamentary practices by seeking to place on the table notifications issued on 5th July 1976 and 6th August 1976. I think our own Subordinate Legislation